c) whether the existing Veterinary Hospitals are sufficient to meet the needs;

d) number of Veterinary Hospitals proposed to be opened during 93-94 in Bangalore City;

e) the places where they will be opened?

Sri K.N. Nagegowda (Minister of State for Animal Husbandary):-

a) Veterinary Hospitals – 5
Veterinary Dispensaries –10
Primary Veterinary Dispensaries – 4
b) 61863

c) Yes

d) Not yet decided

e) Does not arise

ರಾಜ್ಯದಲ್ಲಿರುವ ಪ್ರೌಢಶಾಲೆಗಳ ವಿವರ

299 (323) ಶ್ರೀ ಹಂಪನಗೌಡ (ಸಿಂಧನೂರು):-

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅತಿ ಹೆಚ್ಚು ಮತ್ತು ಅತಿ ಕಡಿಮೆ ಸರ್ಕಾರಿ ಪ್ರೌಢಶಾಲೆಗಳಿರುವ ಜಿಲ್ಲೆಗಳು ಯಾವುದು;

ಆ) ರಾಯಚೂರು ಜಿಲ್ಲೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಗಳೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು);

ಇ) 1993-94ನೇ ಸಾಲಿನಲ್ಲಿ ಹೊಸ ಸರ್ಕಾರಿ ಮತ್ತು ಖಾಸಗೀ ಪ್ರೌಢಶಾಲೆಗಳನ್ನು ಪ್ರಾರಂಭ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಈ) ಸಿಂಧನೂರು ತಾಲ್ಲೂಕಿನಲ್ಲಿ ಸರ್ಕಾರಿ ಪ್ರೌಢಶಾಲೆಯಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಮತ್ತು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಮತ್ತು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪ್ರೌಢಶಾಲೆಗಳಿವೆಯೇ ?

ಡಾ|| ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತ ಪ್ರೌಢ ಶಿಕ್ಷಣ ಸಚಿವರು):-

ಅ) 1. ಗುಲ್ಬರ್ಗಾ ಜಿಲ್ಲೆ 162
2. ಕೊಡಗು ಜಿಲ್ಲೆ 25

ಆ) 94 ಪ್ರೌಢಶಾಲೆಗಳು

ತಾಲ್ಲೂಕು	
1. ರಾಯಚೂರು	17
2. ಮಾನ್ವಿ	09
3. ಸಿಂಧನೂರು	07
4. ಗಂಗಾವತಿ	09
5. ಕೊಪ್ಪಳ್	12
6. ಯಲಬುರ್ಗಾ	13
7. ಕುಷ್ಟಗಿ	10
8. ಲಿಂಗಸೂಗೂರು	11
9. ದೇವದುರ್ಗ	06
	94

ಇ) 1993-94ನೇ ಸಾಲಿನಲ್ಲಿ ಸರ್ಕಾರಿ ಹಾಗೂ ಖಾಸಗೀ ಪ್ರೌಢಶಾಲೆಗಳ ಅವಶ್ಯಕತೆಯನ್ನು ಪರಿಶೀಲಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು.

ಈ) 1932 ಸಿಂಧನೂರು ತಾಲ್ಲೂಕಿನಲ್ಲಿ 8 ಸರ್ಕಾರಿ ಪ್ರೌಢಶಾಲೆಗಳಿದ್ದು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಸರ್ಕಾರಿ ಪ್ರೌಢಶಾಲೆಗಳು ಇರುತ್ತವೆ.

ಬೆಂಗಳೂರು ಜಿಲ್ಲೆಯಲ್ಲಿರುವ ಪ್ರೌಢಶಾಲೆಗಳ ಸಂಖ್ಯೆ

300 (166) ಶ್ರೀ ಕೆ. ಲಕ್ಕಣ್ಣ (ರಾಜಾಜಿ ನಗರ):-

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಜಿಲ್ಲೆಯಲ್ಲಿರುವ ಪ್ರೌಢಶಾಲೆಗಳ ಸಂಖ್ಯೆ ಎಷ್ಟು; ಹಾಗೂ ಉಪಾಧ್ಯಾಯರ ಸಂಖ್ಯೆ ಎಷ್ಟು (ಪ್ರತಿ ಶಾಲೆಗಳ ಪ್ರತ್ಯೇಕ ವರದಿ ನೀಡುವುದು);

ಆ) ಮೇಲ್ಕಂಡ ಶಾಲೆಗಳಲ್ಲಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು; (ಪ್ರತಿ ಶಾಲೆಗಳ ಪ್ರತ್ಯೇಕ ವರದಿ ನೀಡುವುದು);

ಇ) ಪ್ರತಿ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಉಪಾಧ್ಯಾಯರುಗಳು ಇರುವರೇ ಅಥವಾ ಹೆಚ್ಚಿನ ಉಪಾಧ್ಯಾಯರು ಇರುವರೇ ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-

ಅ)	ಶಾಲೆಗಳ ಸಂಖ್ಯೆ		ಉಪಾಧ್ಯಾಯರ ಸಂಖ್ಯೆ
1. ಬೆಂಗಳೂರು ನಗರ	1. ಸರ್ಕಾರಿ	37	538
(ದಕ್ಷಿಣ)	2. ಖಾಸಗಿ	118	1274
2. ಬೆಂಗಳೂರು ನಗರ	1. ಸರ್ಕಾರಿ	22	237
(ಉತ್ತರ)	2. ಖಾಸಗಿ	111	1284